ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ.ಸಿ.ನಂ. 4404-2023

ಸಿ.ಡಬ್ಲ್ಯೂ -06
ಪಿ.ಡಬ್ಲ್ಯೂ-06

ಸಾಕ್ಷಿದಾರನ ಹೆಸರು :- ಸಂತೋಷ ಕುಮಾರ
ತಂದೆಯ ಹೆಸರು :- ಗಂಗಪ್ಪ
ವಯಸ್ಸು :- 32 ವರ್ಷ
ಉದ್ಯೋಗ :- ವ್ಯವಸಾಯ
ವಾಸ :- ಬ್ಯಾಲದಕೇರೆ

**ಸಾಕ್ಷಿಗೆ ದಿಃ 10.20.2026 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ಸ್ಥಳ ಪಂಚನಾಮೆಗೆ ನನ್ನ ಸಹಿ ಇರುತ್ತದೆ. ದಿಃ 13.07.2022 ರಂದು ಹೊನ್ನೆಗೌಡನಪಾಳ್ಯದ ಜಯಮ್ಮಾ ಮತ್ತು ಗಿರೀಶ್ ಅವರ ಜಮೀನಿನ ಬಳಿ ದನಕರಗಳನ್ನು ಮೇಯಿದ ವಿಚಾರಕ್ಕೆ ಹುಚ್ಚಮ್ಮಾ ಮತ್ತು ಅನೀತಾ ಜಗಳ ಮಾಡಿಕೊಂಡಿದ್ದರು. ಪೋಲಿಸರ ಸ್ಥಳಕ್ಕೆ ಬಂದಿದ್ದು 11.45 ರಿಂದ 12.45ರ ಸಮಯದಲ್ಲಿ ಸಹಿ ಪಡೆದಿರುತ್ತಾರೆ. ಆ ಸಮಯದಲ್ಲಿ ನನ್ನ ಜೊತೆ ಚಾಸಾ 1 ಮತ್ತು 5 ಸಹ ಸಹಿ ಮಾಡಿರುತ್ತಾರೆ. ಪೋಲಿಸರು ದೊಣ್ಣೆ ಮತ್ತು ಕಲ್ಲನ್ನು ಪರಿಶೀಲನೆ ಮಾಡಿ ತಗೆದುಕೊಂಡು ಹೋಗುವುದಾಗಿ ಹೇಳಿರುತ್ತಾರೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸ್ಥಳ ಪಂಚನಾಮೆಗೆ ಇರುವ ಸಹಿಯನ್ನು ನಿ.ಪಿ 2(ಬಿ) ಎಂದು ಗುರುತಿಸಲಾಯಿತು.

**ಆರೋಪಿ ಪರಃ ಪಾಟೀ ಸವಾಲುಃ ಬಿ.ಆರ್.ಆರ್ ವಕೀಲರಿಂದಃ**

ಚಾಸಾ 1 ನನ್ನ ಚಿಕ್ಕಪ್ಪ ಆಗಬೇಕು. ಮಹಜರ ಸಮಯದಲ್ಲಿ ಪೋಲಿಸರಿಗೆ ಚಾಸಾ 1 ನನ್ನ ಚಿಕ್ಕಪ್ಪ ಆಗಬೇಕು ಎಂದು ಹೇಳಿರುತ್ತೇನೆ. ಪೋಲಸರು ಸ್ಥಳದಲ್ಲಿ ಮತ್ತು ಮಹಜರಗೂ ಮೊದಲು ಯಾವುದೇ ನೋಟಿಸ್ ನೀಡಿರುವುದಿಲ್ಲ. ಮಹಜರನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತು. ಮಹಜರನಲ್ಲಿ ಸ್ಥಳದಲ್ಲಿ ನೋಟಿಸ್ ಕೊಟ್ಟ ಬಗ್ಗೆ ಬರೆಯಲಾಗಿದೆ ಎಂದರೆ ಸಾಕ್ಷಿ ಕೊಟ್ಟಿಲ್ಲವೆಂದು ಹೇಳುತ್ತಾರೆ.

ಮಹಜರನ್ನು ನಾನು ಓದಿ ಸಹಿ ಮಾಡಿರುತ್ತೇನೆ. ಮಹಜರನಲ್ಲಿನನಗೆ ಗೊತ್ತಿಲ್ಲದ್ದನ್ನು ಬರೆದ ನಾನು ಸಹಿ ಮಾಡುವುದಿಲ್ಲ. ಪೋಲಿಸರು ಮಹಜರನಲ್ಲಿ ನೋಟಿಸ್ ನೀಡಿದ ಬಗ್ಗೆ ಬರೆದಿದ್ದು ಅದು ಬರವಣಿಗೆ ವ್ಯತಿರೀತ್ಯವಾಗಿರುತ್ತದೆ ಎಂದರೆ ಸರಿ. ಮಹಜರನ ಎಲ್ಲಾ ಪುಟಗಳಿಗೆ ನಾನು ಓದಿ ಸಹಿ ಮಾಡಿರುತ್ತೇನೆ. ಮಹಜರನ 2 ಮತ್ತು 3 ನೇ ಪುಟವನ್ನು ನನ್ನ ಸಮಕ್ಷಮ ಬರೆದಿರುವುದಿಲ್ಲ. ಮು. ಮಾ. ಗಳನ್ನು ಚಾಸಾ 1 ದೂರನ್ನು ನೀಡುವ ಸಮಯದಲ್ಲಿ ನೀಡಿದ್ದರು. ಈ ವಿಚಾರವನ್ನು ಮಹಜರನಲ್ಲಿ ಬರೆದಿಲ್ಲವೆಂದರೆ ಸರಿ.

ಮಹಜರಗೆ ಜಯಮ್ಮಾ ಎನ್ನುವವರ ಸಹಿ ಪಡೆದಿದ್ದು ಉಳಿದವರ ಸಹಿಯನ್ನು ಯಾವಾಗ ಪಡೆದಿರುತ್ತಾರೆಂದು ನನಗೆ ಗೊತ್ತೀಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಹಾಗೆ ಹೇಳುವ ದಿನಾಂಕ ಮತ್ತು ಸಮಯದಲ್ಲಿ  ಸ್ಥಳಕ್ಕೆ ಬಂದಿಲ್ಲ ನಾನು ಪೋಲಿಸ ಠಾಣೆಗೆ ಹೋಗಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ 1 ಅವರು ಪೋಲಿಸರ ಜೊತೆ ಸೇರಿ ಮು. ಮಾ. ಗಳನ್ನು ಸೃಷ್ಟಿ ಮಾಡಿದ್ದು ನಾನು ಅವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ  ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.